C.C.No. 501/2018
PW-2

ದಿನಾಂಕಃ **17.09.2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ **RSM** ರವರಿಂದಃ

ನನ್ನನ್ನು ವಿದಾನಸಭೆ ಚುನಾವಣೆ ಮುಗಿಯುವ ವರೆಗೂ ಕಣ್ಗಾವಲು ಅಧಿಕಾರಿಯಾಗಿ ನೇಮಕ ಮಾಡಲಾಗಿರುತ್ತದೆ ಆದರೆ ಯಾವ ದಿನದಂದು ನನ್ನನ್ನು ಹೀಗೆ ನೇಮಕ ಮಾಡಿರುತ್ತಾರೆ ನನಗೆ ನೆನಪಿಲ್ಲ. ನಾನು **01.05.2018** ರಂದು ಬೆಳಿಗ್ಗೆ **05-30** ಗಂಟೆಗೆ ಸಂತೇಮರಹಳ್ಳಿಗೆ ಹೋಗಿರುತ್ತೇನೆ ಎಂದು ಮೊದಲನೇ ಭಾರಿಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಹೀಗೆ **25** ನಿಮಿಷಗಳ ನಂತರ ಚಾಸಾ-**1** ರವರು ಚಾಸಾ-**5** ರವರಿಗೆ ದೂರವಾಣಿ ಕರೆಯನ್ನು ಮಾಡಿದರು ಎನ್ನಲಾದ ವಿಚಾರವನ್ನು ಮೊದಲನೇ ಭಾರಿಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಘಟನೆ ನಡೆದಿದೆ ಎನ್ನಲಾದ ದಿನದಂದು ಸಂತೇಮರಹಳ್ಳಿಯಲ್ಲಿಯೇ ಇದ್ದೆ.

ಸಂತೇಮರಹಳ್ಳಿ ಸರ್ಕಲ್‌ಯಿಂದ ಎಷ್ಟು ದೂರದ ವರೆಗೆ ಬಂಟಿಂಕ್ಸ್ ಗಳನ್ನು ಹಾಕಲಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು **60** ಮೀಟರ್ಗಳಷ್ಟು **5** ರೋ ಗಳಲ್ಲಿ ಬಂಟಿಂಕ್ಸ್ ಗಳನ್ನು ಹಾಕಲಾಗಿತ್ತು ಎಂದು ನುಡಿಯುತ್ತಾರೆ, ಸಾಕ್ಷಿಯು ಮುಂದುವರೆದು **4** ಬಾವುಟಗಳನ್ನು ಸಹ ಹಾಕಲಾಗಿತ್ತು ಎಂದು ನುಡಿಯುತ್ತಾರೆ. **60** ಮೀಟರ್ಗಳಷ್ಟು **5** ರೋಗಳಲ್ಲಿ ಕುದೇರು ರಸ್ತೆಯಲ್ಲಿ ಹಾಕಲಾಗಿತ್ತು. ಕುದೇರು ರಸ್ತೆಯ ಎಡಭಾಗಕ್ಕೆ ಎಲ್ಲಾ ಬಂಟಿಂಕ್ಸ್ ಗಳನ್ನು ಹಾಕಲಾಗಿತ್ತು. ಬಂಟಿಂಕ್ಸ್ ಗಳ ಉದ್ದ ಅಗಲವನ್ನು ನನಗೆ ಹೇಳಲು ಬರುವುದಿಲ್ಲ. ನಾನು **60** ಮೀಟರ್ಗಳು ಎಂದು ಅಂದಾಜಿನ ಮೇಲೆ ಹೇಳಿರುತ್ತೇನೆ. ನಾನು ನಮ್ಮ ಇಲಾಖೆಯ ಅಂಕಿ ಅಂಶಗಳ ಸಲುವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ಕಲ್‌ಗೆ ಹೋದಾಗ ಚಾಸಾ-**1, 2, 4** ಮತ್ತು **5** ಮತ್ತು ಫೋಟೋಗ್ರಾಫರ್ ರಾದ ಪುನೀತ್ ಇದ್ದರು. ಸರ್ಕಲ್‌ನಲ್ಲಿ ಆರೋಪಿಗಳು ಇರಲಿಲ್ಲ. ಬಂಟಿಂಕ್ಸ್ ಗಳನ್ನು ಯಾರು ಕಟ್ಟಿರುತ್ತಾರೆಂದು ನನಗೆ ವೈಯ್ಯಕ್ತಿಕವಾಗಿ ಗೊತ್ತಿಲ್ಲ ಎಂದರೆ ನಿಜ ಸಾಕ್ಷಿಯು ಮುಂದುವರೆದು ತಾವು ಗ್ರಾಮ ಪಂಚಾಯಿತಿಯಲ್ಲಿ ವಿಚಾರಿಸಿದಾಗ ಪ್ರಧಾನ ಮಂತ್ರಿಯವರ ಪ್ರಚಾರದ ಸಲುವಾಗಿ **1** ಮತ್ತು **2** ರವರು ಕೇವಲ ಕಾರ್ಯಕ್ರಮವನ್ನು ನಡೆಸಲು ಪರವಾನಗಿಯನ್ನು ಪಡೆದಿರುತ್ತಾರೆ ಎಂದು ಗೊತ್ತಾಯಿತು ಎಂದು ನುಡಿಯುತ್ತಾರೆ. ಯಾವುದೇ ರೀತಿ ಬಂಟಿಂಕ್ಸ್ ಗಳನ್ನು ಹಾಕಿಲ್ಲದೇ ಇದ್ದರೂ ಸಹ ನಾನು ಘಟನೆ ನಡೆದಿದೆ ಎನ್ನಲಾದ ದಿನದಂದು ಸಂತೇಮರಹಳ್ಳಿ ವೃತ್ತಕ್ಕೆ

ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗಿದ್ದರೆ ಅಲ್ಲಿ ಕಟ್ಟಿತ್ತು ಎನ್ನಲಾದ ಬಂಟಿಂಕ್ಸ್ ಗಳನ್ನು ಜಪ್ತುಪಡಿಸಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಾನು ದಿನಾಂಕ 05.05.2018 ರಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಚಾಸಾ-1 ರವರು ಆರೋಪಿತರ ವಿರುದ್ಧವಾಗಿ ಪೊಲೀಸ್ ಠಾಣೆಯಲ್ಲಿ ಲಿಖಿತ ಮಾಹಿತಿ ಹೇಳಿಕೆಯನ್ನು ನೀಡಿರುವ ವಿಚಾರ ನನಗೆ ಗೊತ್ತಿದೆ. ನಾನು ದಿನಾಂಕ 04.05.2018 ರಂದು ಸಂತೇಮರಹಳ್ಳಿಯಲ್ಲೇ ಕೆಲಸ ಮಾಡುತ್ತಿದ್ದೆ. ಆರೋಪಿತರು ಯಾವುದೇ ಬಂಟಿಂಕ್ಸಗಳನ್ನು ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

17.09.2022.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.